**<u>ದಿ:12.12.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಮುಂದುವರಿದ ಪಾಟೀ ಸವಾಲು:-</u>**ಪ್ರತಿವಾದಿ ಪರ ಶ್ರೀ.**B.V.R.,** ವಕೀಲರಿಂದ:-

ನಾನು ದಿ:20.03.1979 ನನ್ನ ತಂದೆ, ನನ್ನ ಸಹೋದರ ನಾಗರಾಜಪ್ಪ ಅವರ ಪರವಾಗಿ ಮತ್ತು ನನ್ನ ಮತ್ತು ಅಣ್ಣ ಕೆಂಚನಗೌಡರವರ ಪರವಾಗಿ ಮಾರಾಟ ಮಾಡಿರುವ ಪತ್ರವನ್ನು ನಾನು ನೋಡಲು ಪ್ರಯತ್ನ ಪಟ್ಟಿರುವುದಿಲ್ಲ. ಕಳೆದ ಸಾಕ್ಷಿ ವಿಚಾರಣೆಯಿಂದ ಇಲ್ಲಿಯವರೆಗೂ ನೋಡಲು ಪ್ರಯತ್ನ ಪಟ್ಟಿರುವುದಿಲ್ಲ. ನನ್ನ ತಂದೆ ಈಗ ಸುಮಾರು 04 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ನನ್ನ ಅಣ್ಣ ನಾಗರಾಜಪ್ಪ ಮತ್ತು ಅಣ್ಣ ಕೆಂಚನಗೌಡರವರು ಸಹ ಜೀವಂತ ಇರುತ್ತಾರೆ. ನಾನು ನಮ್ಮ ಅಣ್ಣಂದಿರನ್ನು ಸಹ ಸದರಿ ಮಾರಾಟ ಪತ್ರದ ಬಗ್ಗೆ ಕೇಳಿ ತಿಳಿದುಕೊಂಡಿರುವುದಿಲ್ಲ. ನಾನು ಪ್ರತಿವಾದಿರವರು ಸಲ್ಲಿಸಿರುವ ತಕರಾರನ್ನು ಕೇಳಿ ತಿಳಿದುಕೊಂಡಿರುವುದಿಲ್ಲ. ಸದರಿ ಪತ್ರದ ಬಗ್ಗೆ ಸುಮಾರು 3-4 ವರ್ಷಗಳ ಹಿಂದೆ ಜಮೀನು ಅಳತೆ ಮಾಡುವ ಸಂದರ್ಭದಲ್ಲಿ ತಿಳಿಯಿತು. ಸದರಿ ಮಾರಾಟ ಮಾಡುವ ಸಂದರ್ಭದಲ್ಲಿ ದಿ:20.03.1979 ಕ್ರಯಪತ್ರ ಆಗುವ ಸಂದರ್ಭದಿಂದಲೂ ಇಲ್ಲಿಯವರೆಗೂ ಕೂಡ ಮಾರಾಟವಾದ ಜಮೀನಿನ ಸುತ್ತಲೂ ಕಲ್ಲುಕಟ್ಟೆ ಇರುತ್ತದೆ ಎಂದರೆ ಸರಿ. ಸದರಿ ಕಲ್ಲುಕಟ್ಟೆ ಅಳತೆ 2 ರಿಂದ 3 ಅಡಿ ಎತ್ತರ ಮತ್ತು 02 ಅಡಿ ಅಗಲ ಇರುತ್ತದೆ. ಸದರಿ ಕ್ರಯ ಪತ್ರದ ನಂತರ ಸಿದ್ದಪ್ಪರವರು ಆಸ್ತಿಯ ಸ್ವಾದೀನದಲ್ಲಿ ಇರುತ್ತಾರೆ ಎಂದರೆ ಸರಿ. ಸದರಿ ಕ್ರಯಪತ್ರವನ್ನು 1979 ರಿಂದ ಇಲ್ಲಿಯವರೆಗೂ ಕೂಡ ನಾವು ಯಾರು ಸಹ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. 1979 ರಲ್ಲಿ ಮಾರಾಟವಾದ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆ:ಹೆಚ್.ಡಿ.ಶಿವಮೂರ್ತಪ್ಪ ರವರ ಜಮೀನು, ಪಶ್ಚಿಮಕ್ಕೆ:ರಾಮಚಂದ್ರಪ್ಪರವರ ಜಮೀನು, ಉತ್ತರಕ್ಕೆ:ಕರಡಿ ರೇವಣ್ಣರವರ ಜಮೀನು ಮತ್ತು ದಕ್ಷಿಣಕ್ಕೆ:ಪ್ರತಿವಾದಿಯವರ ಜಮೀನು ಇರುತ್ತದೆ. ಸದರಿ ಚಕುಬಂದಿ ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸಿರುತ್ತೇನೆ. 1979 ರ ಕ್ರಯ ಪತ್ರದ ಪ್ರಕಾರ ಪೂರ್ವಕ್ಕೆ:ಹಂಪಣ್ಣರವರ ಜಮೀನು, ಪಶ್ಚಿಮಕ್ಕೆ:ಹೆಚ್.ಡಿ.ಶಿವಮೂರ್ತ್ಯಪ್ಪರವರ ಜಮೀನು,

ಉತ್ತರಕ್ಕೆಃಚೆನ್ನಪ್ಪರವರ ಜಮೀನು ಮತ್ತು ದಕ್ಷಿಣಕ್ಕೆಃಆಲೆಕಲ್ಲು ಗುಡ್ಡ ಇರುತ್ತದೆ ಎಂದರೆ ಸರಿ. ಸದರಿ ಕ್ರಯಪತ್ರದ ಪ್ರಕಾರ ಸಿದ್ದಪ್ಪರವರಿಗೆ ಕಂದಾಯ ದಾಖಲೆಗಳು ಬಂದಿರುತ್ತವೆ ಎಂದರೆ ಸರಿ. ಪ್ರತಿವಾದಿಯವರ ಗಂಡನ ಹೆಸರು ಲೋಕೇಶಪ್ಪ ಇರುತ್ತದೆ ಎಂದರೆ ಸರಿ. 1979 ರಲ್ಲಿ ಖರೀದಿ ಮಾಡಿದ ಸಿದ್ದಪ್ಪ ಮತ್ತು ಪ್ರತಿವಾದಿ ಗಂಡ ಲೋಕೇಶಪ್ಪ ಅಣ್ಣ ತಮ್ಮ ಎಂದರೆ ಸರಿ. ಅವರಿಬ್ಬರು ಒಟ್ಟು ಕುಟುಂಬದಲ್ಲಿ ಜೀವನ ಮಾಡಿ ಸದರಿ ಜಮೀನನ್ನು ಅನುಬೋಗ ಮಾಡುತ್ತಿದ್ದರು ಎಂದರೆ ಸರಿ. ಸಿದ್ದಪ್ಪ ಮತ್ತು ಲೋಕೇಶಪ್ಪರವರ ತಂದೆಯ ಹೆಸರು ಚನ್ನಬಸಪ್ಪ ಇರುತ್ತದೆ ಎಂದರೆ ಸರಿ. ಸಿದ್ದಪ್ಪ, ಲೋಕೇಶಪ್ಪ ಮತ್ತು ಅವರ ತಂದೆ ಚೆನ್ನಬಸಪ್ಪ ಸೇರಿಕೊಂಡು ದಿಃ26.11.1985 ರಲ್ಲಿ ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಪಾಲು ವಿಭಾಗ ಪತ್ರದ ಪ್ರಕಾರ ನಮ್ಮ ತಂದೆ ಮತ್ತು ಸಹೋದರರಿಂದ ಖರೀದಿ ಮಾಡಿದ ದಿಃ20.03.1979 ಕ್ರಯ ಪತ್ರದಿಂದ ಬಂದ ಆಸ್ತಿಯನ್ನು ಲೋಕೇಶಪ್ಪರವರ ಪಾಲಿಗೆ ಬಂದಿರುತ್ತದೆ ಎಂದರೆ ಸರಿ. ನಂತರ ಲೋಕೇಶಪ್ಪರವರ ಸ್ವಾದೀನಕ್ಕೆ ಬಂದಿರುತ್ತದೆ ಎಂದರೆ ಸರಿ. ಸದರಿ ಆಸ್ತಿಯ ಉತ್ತರ ದಿಕ್ಕಿಗೆ 8 ಅಡಿ ಅಗಲ 06 ಎತ್ತರದ ಕಲ್ಲುಕಟ್ಟೆ ಇರುತ್ತದೆ ಎಂದರೆ ಸರಿಯಲ್ಲ. ಅದಕ್ಕೆ ಲಗತ್ತಾಗಿ ಮಣ್ಣಿನ ಏರಿ ಇರುತ್ತದೆ ಎಂದರೆ ಸರಿ. ಅದು ಎಷ್ಟು ಅಡಿ ಅಗಲ ಇರುತ್ತದೆ ನನಗೆ ಗೊತ್ತಿಲ್ಲ. ಮೊದಲಿಗೆ ಸದರಿ ಏರಿಯೂ 08 ಅಡಿ ಇತ್ತು ಪ್ರಸ್ತುತ 04 ಅಡಿ ಇರುತ್ತದೆ. ಪ್ರತಿವಾದಿ ಮತ್ತು ಅವರ ಕುಟುಂಬದವರು ಖರೀದಿ ಮಾಡಿದ 05 ಎಕರೆ 20 ಗುಂಟೆ ಜಮೀನಿನಲ್ಲಿ ಅನುಬೋಗದಲ್ಲಿ ಇರುತ್ತಾರೆ ಎಂದರೆ ಸರಿ. ಅವರನ್ನು ಬಿಟ್ಟು ಬೇರೆ ಯಾರಿಗೂ ಹಕ್ಕು ಇರುವುದಿಲ್ಲ ಎಂದರೆ ಸರಿ. ಲೋಕೇಶಪ್ಪರವರು ಈ ಹಿಂದೆ 1997 ರಲ್ಲಿ ಕಮಲಮ್ಮರವರಿಗೆ ಹಣದ ಅವಶ್ಯಕತೆಯಿಂದ ಅವರಿಗೆ 04 ಎಕರೆ ಜಮೀನನ್ನು ಬರೆದುಕೊಟ್ಟಿದ್ದರು ಎಂದರೆ ಸಾಕ್ಷಿಯು ಕ್ರಯಕ್ಕೆ ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ಆಗಲೂ ಸಹ ಪ್ರತಿವಾದಿಯವರೇ ಸ್ವಾದೀನದಲ್ಲಿ ಇರುತ್ತಾರೆ ಎಂದರೆ ಸರಿ. ಲೋಕೇಶಪ್ಪರವರು ಸಾಲ ತೀರಿಸಿದ ನಂತರ ಕಮಲಮ್ಮರವರು ಪ್ರತಿವಾದಿಯವರಿಗೆ ದಿಃ31.03.2001 ರಲ್ಲಿ ವಾಪಸು ಕ್ರಯ ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಜಮೀನಿಗೆ ಚಾನಲ್ ನೀರಿನ ಸೌಲಭ್ಯ ಇರುವುದಿಲ್ಲ ಎಂದರೆ ಸರಿ. ಲೋಕೇಶಪ್ಪರವರು ಜಮೀನಿನ ಖರೀದಿ ನಂತರ ಒಂದು ಬೋರ್ ವೆಲ್ ಹಾಕಿಸಿರುತ್ತಾರೆ ಎಂದರೆ ಸರಿ. ಹಳೇ ಬೋರಿನ ಪಕ್ಕದ ನಂತರ 50 ರಿಂದ 60 ಅಡಿ ದೂರದಲ್ಲಿ 2016

ರಲ್ಲಿ ಮತ್ತೊಂದು ಬೋರ್ವೆಲ್ ಹಾಕಿಸಿರುತ್ತಾರೆ ಎಂದರೆ ಸರಿ. ಸದರಿ 02 ಬೋರ್ ವೆಲ್ ಗಳ ನೀರಿನಿಂದ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ.

(ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಸಿವಿಲ್ ನ್ಯಾಯಾಧೀಶರು, ಜಗಳೂರು